DOC-326
T-P-2

(1)

51st Year of Publication ★ SATYAVADI Daily, MYSORE 4

Reg No ಬಿ ಕ್ಲ 155 ಶ್ರೀ 26 - 6 - 1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

Space available
For Permanent Advertisement

ವ್ಯವಸ್ಥಾಪಕರು : ಕರುಣಿ ಗರ್ಡೀಕರ್ ಎಂ. ಎ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರಾಜಸ್ಥಾನದಲ್ಲಿ ಪಾನನಿರೋಧ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಲೈನಲ್ಲಿ ಶ್ರೀನೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ನುತ್ತು ಧನ ಸೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮೊಧವ್ ತಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೇಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ ಸಿ ಮೋದಿಯವರು ಡಾ ॥ ಆರ್. ಎಸ್. ನಂದುಂಡಸ್ವಾಮಿ (ಗ್ಲಾಸ್ಗೋ) ಯವರು ಶುಭಾಶಯದೊಡನೆ ಸೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಿಂತಿಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಅದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವುದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಒಲಂಪಿಕ್ ನಗರ

ಮ್ಯೂನಿಚ್— 1970 ರ ಒಲಂಪಿಕ ನಗರ ಕಟ್ಟಲು ಕಟ್ಟಕಡೆ ಸಮತ ದೊರೆತಿದೆ. ಚಾವಣಿಯು ಡೇರಾರೀತಿಯಲ್ಲಿದ್ದು ಯೂರೋಪಿನಲ್ಲೇ ಅತಿ ದೊಡ್ಡ ಚಾವಣಿಯಾಗಿರುವುದು – ಈ ಚಾವಣಿಗೆ 30 ಮಿಲಿಯ ಮಾರ್ಕ್ಸ್ (7.5 ಮಿಲಿಯ ಡಾಲರು) ಖರ್ಚು ಮತ್ತು ಅದನ್ನು ಕಾಪಾಡಲು ವರ್ಷಕ್ಕೆ 500000 ಮಾರ್ಕ್ಸ್ (12500 ಡಾಲರು) ಖರ್ಚು.

★ ಮೈಸೂರು— ಗ್ರಾಜುಯೇಟ್ಸ್ ಕ್ಷೇತ್ರದಿಂದ ಶ್ರೀ ಎ. ಪಿ. ಸುಬ್ಬಯ್ಯ (ಜನಸಂಘ) ಚುನಾಯಿತರಾದರು.

ಪಾದರಕ್ಷೆ – 69

ನವಬೆಹಲಿ— 'ಪಾದರಕ್ಷೆ – 69" ಶೀರ್ಷಿಕೆಯ ಅಂತರಾಷ್ಟ್ರೀಯ ಪ್ರದರ್ಶನವನ್ನು ನುಂದಿನ ವರ್ಷ ಸೆಪ್ಟಂಬರು 10 ರಿಂದ 24 ರವರೆಗೆ ಮಾಸ್ಕೋ ನಗರದಲ್ಲಿ ನಡೆಸಲಾಗುವುದು.

★

ರಾಜಕುಮಾರರ ಔದಾರ್ಯ

ಬೆಂಗಳೂರು— ತನ್ನ ಯಶಸ್ವಿಯಾದ 100 ನೇ ಚಿತ್ರದ ಗುರುತಾಗಿ ವೈಭವ ಸಮಾರಂಭ ನಡೆಸಿದ ರಾಜಕುಮಾರ್ ಸನ್ಮಾನ ಸಮಿತಿಯ ವಿದ್ಯಾಭ್ಯಾಸ ನಿಧಿಗೆ ರೂ. 10212 ಉದಾರ ದಾನ ಮಾಡುವುದಾಗಿ ಪ್ರಖ್ಯಾತ ಕನ್ನಡ ಚಲಚ್ಚಿತ್ರ ನಟ ಶ್ರೀ ರಾಜಕುಮಾರ್ ತಿಳಿಸಿದರು – ವಿಶ್ವವಿದ್ಯಾನಿಲಯದ ಉಪಕುಲಪತಿ ಶ್ರೀ ಗೋಕಾಕರು ಈ ಔದಾರ್ಯವನ್ನು ಪ್ರಶಂಸಿಸಿದರು – ಡಾ ॥ ನಾಗಪ್ಪ ಆಳ್ವಾರವರು ಅಧ್ಯಕ್ಷತೆ ವಹಿಸಿದ್ದರು – ಕಾಂಗ್ರೆಸ್ ಅಧ್ಯಕ್ಷ ಶ್ರೀ ಶ್ರೀ ನಿಜಲಿಂಗಪ್ಪ ಮತ್ತು ಹಲವು ಪ್ರಮುಖ ಅತಿಥಿಗಳು ಬಂದಿದ್ದರು.

ಮಹಿಳೆಯ ಸಾಹಸ

ರಾಜಕೋಟಿ— ಕಳ್ಳತನ ಮಾಡಿದ್ದ 50 ವರ್ಷದ ಮಹಿಳೆಯನ್ನು ಪೋಲಿಸರು ರೈಲಿನಲ್ಲಿ ಕರೆತರುತ್ತಿದ್ದಾಗ ಪಿಸ್ತೂಲು ಮತ್ತು ಕನಾನೂಸ್ ಸ್ಫೋರ್ಟಗಳ ಮಧ್ಯೆ ನದಿಯ ಸೇತುವೆಯಿಂದ 40 ಅಡಿ ಕೆಳಕ್ಕೆ ಹಾರಿದಳು. ಜ್ಞಾನಶೂನ್ಯಳಾಗಿದ್ದ ಇವಳನ್ನು ಹಿಡಿದು ಆಸ್ಪತ್ರೆಗೆ ಸಾಗಿಸಲಾಯಿತು.

★

ಹಿಂದೂ ತತ್ವ ಜ್ಞಾನಪೀಠ

ಮೈಸೂರು— ವಿಶ್ವವಿದ್ಯಾನಿಲಯದಲ್ಲಿ ಹಿಂದೂ ತತ್ವಜ್ಞಾನಪೀಠವನ್ನು ಉಪ ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಉದ್ಘಾಟಿಸಿದರು – ಇದಕ್ಕಾಗಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ನ ಶ್ರೀ ಜಿ. ಡಿ. ಸೋಮಾನಿ ರೂ. 2 ಲಕ್ಷ ಚಕ್ಕನ್ನು ಉಪ ಪ್ರಧಾನಿಗಳಿಗೆ ಕೊಟ್ಟರು.

★

ವಾಷಿಂಗ್ಟನ್— ನೀಗ್ರೋ ನಾಯಕರ ದಸ್ತಗಿರಿಯಿಂದ ಹಿಂಸಾಕೃತ್ಯಗಳು ಹೆಚ್ಚಿ ಕಳವಳಕಾರಿಯಾಗಿದೆ.

ರಾಜಸ್ಥಾನದಲ್ಲಿ ಪಾನನಿರೋಧ

ಜಯಪುರ— 1973-74 ರಿಂದ ರಾಜಸ್ಥಾನದಲ್ಲಿ ಪೂರ್ಣ ಪಾನನಿರೋಧ ಜಾರಿಗೆ ಬರುವುದು – ಈಗಿನಿಂದ ಹಂತಹಂತವಾಗಿ ಜಾರಿಗೆ ತರಲಾಗುವುದು.

★

ದಸರಾ - ಜಂಬೂಸವಾರಿ

ಈ ವರ್ಷ ದಸರಾ ಮಹೋತ್ಸವ – ಜಂಬೂಸವಾರಿ ನಡೆಯುವದೆಂದು ಬೆಂಗಳೂರುವಾರ್ತೆ ತಿಳಿಸುತ್ತದೆ.

★

ಕನ್ನಡ ಚಲನಚಿತ್ರ ಕಲಾವಿದರು

ಮಂಡ್ಯ— ಜಿಲ್ಲಾ ಕಚೇರಿ ಮತ್ತು ಮನೆಗಳಿಗೆ ನಿಷ್ಠೆ ಪಿಕೆಟ್ ಮಾಡಿದ ಶ್ರೀ ವಾಟಾಳ್ ನಾಗರಾಜ್, ಶ್ರೀ ವೇದಾಂತಂ ಹೆಮ್ಮಿಗೆ ಮತ್ತಿತರ 20 ಮಂದಿ ದಸ್ತಗಿರಿಮಾಡಲ್ಪಟ್ಟು ಮ್ಯಾಜಿಸ್ಟ್ರೇಟರು ಜಾಮೀನು ಮೇಲೆ ಬಿಟ್ಟರು – ನವೆಂಬರ್ ಒಳಗೆ ಎಲ್ಲಾ ಕಛೇರಿಗಳಲ್ಲೂ ಕನ್ನಡ ಜಾರಿಗೆ ಬರಬೇಕೆಂದೂ ತಪ್ಪಿದರೆ ಕರ್ನಾಟಕ ಬಂದ್ ಏರ್ಪಡಿಸಲಾಗುವುದೆಂದೂ ಹೇಳಿದರು.

★

ಪಾರಿವಾಳ ಜೂಜು

ತೆಹ್ರಾನ್— ಮೇ 30 ರಂದು 99 ಜಪಾನಿ ಪಾರಿವಾಳಗಳೂ 361 ಚೀನೀ ಪಾರಿವಾಳಗಳೂ ತೆಹ್ರಾನ್ ಮತ್ತು ಹಿರೋಷಿಮಾದಿಂದ ಏಕಕಾಲದಲ್ಲಿ ಬಿಡಲ್ಪಟ್ಟವು – ಜೀಂಗ್ ಷಿಹ್ ಆರವರ ಪಾರಿವಾಳವು 1003 ಮೈಲಿ ಹಾರಾಡಿ ಬಂದು ತನ್ನ ಪೂರ್ವಿಕನ ಮನೆ ಮೇಲೆ ಕುಳಿತಿದ್ದಿತು : ತುಂಬಾ ಆಟೂಸಗೊಂಡು, ಮಂಕಾದ ಕಣ್ಣು, ಕೊಳಕಾದ ರೆಕ್ಕೆಯಿಂದಿತ್ತು.

★

ಬೆಳಗಾಂ— ವಿಧಾನ ಪರಿಷತ್ತಿಗೆ ಉಪಾಧ್ಯಾಯ ಕ್ಷೇತ್ರದಿಂದ ಶ್ರಿ ಎಸ್. ಬಿ. ಕುಲಕರ್ಣಿ (ಕಾಂಗ್ರೆಸ್) ಚುನಾಯಿತರಾದರು.



— ಕೃಷಿ ಪಂಡಿತ ಶ್ಯಾಂಸುಂದರ್ ಬೋಕರ್ —

ಭಕ್ತ ತುಳಸೀದಾಸ

(ಮುಂದುವರಿದುದು)

ತುಳಸೀದಾಸನು ತಡವಾಗಿ ಹೊರಡಲಿದ್ದ ಆ ಕುಷ್ಟರೋಗಿಯು ಹತ್ತಿರಕ್ಕೆ ಓಡಿಹೋಗಿ, ಅವನ ಪವಿತ್ರ ಪಾದಗಳನ್ನು ಹಿಡಿದುಕೊಂಡನು. " ನನ್ನನ್ನು ಬಿಡು, ನಾನು ಗಾಯಗಳ ಒಂದು ಮುದ್ದೆ " ಎಂದು ಕುಷ್ಟರೋಗಿಯು ಅರಚಿಕೊಂಡನು.

' ಈ ಪಶುಪ್ರಾಯ ಪಾಪಿಯ ಮೇಲೆ ನಿನ್ನ ಕರುಣೆ ಇರಲಿ " ಎಂದು ಕನಿಕರ ಹುಟ್ಟಿಸುವಂತೆ ಬೇಡುತ್ತಾ, ' ನಾನು ಕನಿಕರ ಪಡತಕ್ಕ ತುಚ್ಛ ವಸ್ತುವಾಗಿದ್ದೇನೆ " ಎಂದು ತುಳಸೀದಾಸ್ ಹೇಳಿದನು.

' ನನಗೆ ಶ್ರೀರಾಮಚಂದ್ರನನ್ನು ನೋಡಲು ಕರುಣಿಸು " ಎಂದು ತುಳಸೀದಾಸನು ಮೊಕಾಲೂರಿ ಬೇಡಿದನು.

" ಹಾಗಾದರೆ, ಶ್ರೀ ರಾಮಚಂದ್ರನ ಪವಿತ್ರ ವಾಸಸ್ಥಾನವಾದ ಚಿತ್ರಕೂಟಕ್ಕೆ ಹೋಗಿ, ರಾಮನಾಮಸ್ಮರಣೆಯನ್ನು ಸದಾ ಉಚ್ಚರಿಸುತ್ತಾ ಅಲ್ಲಿ ಕಾದಿರು " ಎಂದು ಕುಷ್ಟರೋಗಿಯು ತಿಳಿಸಿದನು. ತುಳಸೀದಾಸನು ಕೃತಜ್ಞತಾಪೂರ್ವಕ ಭಯಭಕ್ತಿಯಿಂದ ನಮಿಸಿ, ಚಿತ್ರಕೂಟಕ್ಕೆ ಹೋಗಿ ಅವನು ಹೇಳಿದಂತೆ ಮಾಡುತ್ತಿದ್ದನು.

(ಮುಂದುಪರಿಯುವುದು)

Protect the Cow

ಗೋವಧೆ ಕೂಡಲೆನಿಷೇಧವಾಗಲಿ

SHAKTI SUDHA

A Superb Tonic



ಹಾಲಿಗಾಗಿ ಹಸು, ಮಾಂಸಕ್ಕಾಗಿ ಅಮಾಯಕರು ಹೆಣ್ಣು ಮಕ್ಕಳ ಹತ್ಯೆ ನಡೆಯಲಿ

Cow Slaughter should be banned Immediately

ವುಡ್‌ಲಾಂಡ್ಸ್ 28-6-68 ರಿಂದ

ಅನೋಘ ಆರಂಭ

— ಮನೋಹರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಜುಕ್ ಗಯಾ ಆಸ್ಮಾನ್

ಪಾತ್ರ— ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಛೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

Jhuk Gaya Aasman

ಆಪೇರಾ— 21-6-68 ರಿಂದ

ಪವಿತ್ರ ಪಿಕ್ಚರ್ಸ್‌ರವರ

ಅನುಭವಿ [ತಮಿಳು]

ಪಾತ್ರ— ಜೈಶಂಕರ್, ಎಲ್. ವಿಜಯಲಕ್ಷ್ಮಿ, ನಾಗೇಶ್

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

— ಗೋರಕ್ಷಣೆ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ

ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಹಂದಾವಾಯಿದೆ ಗಳಿದಂವರು ಇವಂಗೆ ಚಂದ್ರ ಪಾವತಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯಸಗಂ, ಬೆಂಗಳೂರು

ಶ್ರೀ ಬಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು

ಶ್ರೀ ಅನಂತನಂಸಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ ಹೊಂಗನೂರು

ಗೋರಕ್ಷಣ ಆಫೀಸು ಸಕ್ಕದಾಕಿ ಪೆಸ್ ಚಾಮರಾಜಪುರಂ ಮೈಸೂರು

ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the ' Satyavadi ' is to be celebrated very soon.

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4